ಸ್ವಲ್ಪ ಹಣ ಕಡಿಮೆಯಾಗಿದೆ; ಏಕೆಂದರೆ ಚಾನಲ್ ಹೊಡೆಯತಕ್ಕಂಥ ವಿಚಾರ ದಲ್ಲಿ 5 ಕಿಲೋಮೀಟರ್ ಜಾಸ್ತಿ ಆಗುತ್ತಿತ್ತು, ಅದನ್ನು ಕಡಿಮೆ ಮಾಡಬಹುದು ಎನ್ನತಕ್ಕಂಥ ವಿಚಾರ ದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡುವ ವಿಚಾರ ಪಿ.ಎ.ಸಿ. ಮುಂದೆ ಇದೆ. ಈಗ 150 ಲಕ್ಷ ರೂಪಾಯಿಗಳ ಅಂದಾಜು ಮೊತ್ತ ಎಂದ ಎನು ಇದೆ ಇದು ಸದ್ಯಕ್ಕೆ ಮಾತ್ರ ಇಟ್ಟಿರುವುದು. ಪಿ.ಎ.ಸಿ ಅವರು ಸಂಪೂರ್ಣ ವಾಗಿ ಏನು ವರದಿಯನ್ನು ಕೊಡುತ್ತಾರೆ ಅದು ಚಿತ್ರಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುವ ವಿಚಾ ರದ ಬಗ್ಗೆ ಮಾತ್ರ. ಆದರೆ ನಮ್ಮ ಇಲಾಖೆ ಕೊಟ್ಟಿರುವ ಉತ್ತರದಲ್ಲಿ ಹೊಸಕೆರೆ ನಿರ್ಮಾಣ ಅಂತ ಕೊಟ್ಟಿದ್ದಾರೆ. ಅದನ್ನು ಸಹ ನಾವು ಸರಿ ಮಾಡುತ್ತೇವೆ. ತಮ್ಮ ಗಮನಕ್ಕೆ ಬರಲಿ ಅಂತ as it is ಅದನ್ನು ಹಾಗೇ ಕಳಿಸಿದೆ. ಅದು ಅಣೆಕಟ್ಟು ಕಟ್ಟುವುದು, ಹೊಸ ಕೆರೆ ನಿರ್ಮಾಣದ ಮಾತು ಇಲ್ಲ. ಆದರಿಂದ ಸುಮಾರು 37 ಸಿ.ಎಫ್.ಟಿ. ಯಷ್ಟು ನೀರು ಪರಗೋಡು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಬರುತ್ತದೆ. ಮತ್ತು ಗುಡಿಬಂಡೆ ತಾಲ್ಲೂಕು ಹಾಗೂ ಪಟ್ಟಣಗಳಿಗೂ ಕುಡಿಯುವ ನೀರು ಒದಗಿಸಲಾಗುತ್ತದೆ. ಏಕೆಂದರೆ ಅಲ್ಲಿ ಫ್ಲೋರೈಡ್ ಜಾಸ್ತಿ ಇದೆ ಅಂತ ಕಂಡು ಬರುತ್ತಿದೆ. ಅದರ ಸಲುವಾಗಿಯೇ ಈ ಚಿತ್ರಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುತ್ತಾ ಇರುವುದು, ಇದರಲ್ಲಿ ಯಾವುದೇ ತರಹದ ಅನುಮಾನ ತಮಗೆ ಬೇಡ. ಈ ಬಗ್ಗೆ ಸಂಪೂರ್ಣವಾಗಿರತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಆದಷ್ಟು ಜಾಗ್ರತೆಯಾಗಿ ನಾವು ಈ ಕಾರ್ಯಕ್ರಮ ಮುಗಿಸಿ ಕೊಡುತ್ತೇವೆ.

ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಉಪ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

352 (3147) ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ (ಅಣ್ಣಯ್ಯ)(ತುರುವೇಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಪೋಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಅಂತಹ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳು ತುರುವೇಕೆರೆಯ ತಾಲ್ಲೂಕು ಮಾಯಸಂದ್ರ ಪೋಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಏಕೆ ಈ ಉಪ - ಠಾಣೆಯನ್ನು ಮೇಲ್ದರ್ಜೆಗೆ ಏರಿಸಬೇಕೆನ್ನುವ ಕಾರಣವನ್ನು ಕೊಡುತ್ತಾ ಈಗ ಆ ಹೋಬಳಿಯಲ್ಲಿ ಸುಮಾರು 92 ಹಳ್ಳಿಗಳು ಇದ್ದು, ಸುಮಾರು 25-26 ಕಿಲೋಮೀಟರ್ ಅಂತರ ಇರತಕ್ಕಂಥ ಹಳ್ಳಿಯಲ್ಲಿ ಮೊನ್ನೆ ದಿನಾಂಕ 28-3-2000ನೇ ಇಸವಿಯಲ್ಲಿ ಕುಣಿಗಲ್‌ನಲ್ಲಿರತಕ್ಕಂಥ ಲೈಫ್ ಇನ್ಷ್ಯೂರೆನ್ಸ್ ಕಾರ್ಪೊರೇಷನ್‌ನ ಅಸಿಸ್ಟೆಂಟ್ ಬ್ರಾಂಚ್ ಮ್ಯಾನೇಜರ್

ಮ್ಯಾನೇಜರ್ ಆಗಿರುವ ಶ್ರೀ ಸುರೇಂದ್ರ ರೈ ಎನ್ನುವವರನ್ನು ಒಂದು ಟೆಂಪೋ ಟ್ರಾಲರ್‌ನಲ್ಲಿ ಅಟ್ಟಿಸಿಕೊಂಡು ಬಂದು ದುರ್ಷ್ಮಿಗಳು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು ಒಂದು ಅಂಶ. ಮತ್ತು ಹೋದವರ್ಷ ಇದೇ ರೀತಿಯಲ್ಲಿ ಕಾರಿನಲ್ಲಿ ಬಂದು ಪ್ರಯಾಣಿಕರನ್ನು ದರೋಡೆ ಮಾಡುತ್ತಾ ಇರತಕ್ಕಂಥಾದ್ದು ಈ ರೀತಿಯ ಪ್ರಕರಣಗಳು ಜಾಸ್ತಿಯಾಗಿದೆ. ಅಲ್ಲಿ ಈಗ ಒಬ್ಬ ಎ. ಎಸ್. ಐ. ಒಬ್ಬ ದಫೇದಾರ್, 3 ಜನ ಪಿ. ಸಿ.ಗಳು ಮಾತ್ರ ಇದ್ದಾರೆ. ಅವರಿಂದ ಯಾವುದೇ ಕೆಲಸವನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಲ್ಲಿ ಮಾನ್ಯ ಗೃಹ ಮಂತ್ರಿಗಳು ಏನು 10 ಪೋಲೀಸ್ ಠಾಣೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಅದರಲ್ಲಿ ನಮ್ಮ ಮಾಯಸಂದ್ರ ಹೋಬಳಿಗೆ ದಯಮಾಡಿ ಒಂದು ಮೇಲ್ದರ್ಜೆಯ ಪೋಲೀಸ್ ಠಾಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಆ ತಾಲ್ಲೂಕಿನಲ್ಲಿ ಎರಡು ಪೋಲೀಸ್ ಠಾಣೆಗಳು ಇವೆ. ಆದರೆ ನಮ್ಮ ನಾರ್ಮ್ಸ್ ಪ್ರಕಾರ ಈಗ 81 ಸಾವಿರ, 214 ಜನಸಂಖ್ಯೆಗೆ ಒಂದು ಪೋಲೀಸ್ ಠಾಣೆ ಇದೆ. ಇನ್ನೊಂದು ಪೋಲೀಸ್ ಠಾಣೆಯನ್ನು ನಾವು ಮಂಜೂರು ಮಾಡ ಬೇಕಾದರೆ ನಮ್ಮ ನಾರ್ಮ್ಸ್ ಪ್ರಕಾರ ಆಗುವುದಿಲ್ಲ. ಈಗ ಪೋಲೀಸ್ ಠಾಣೆಗಳ ಬೇಡಿಕೆ ಎಲ್ಲಾ ಕಡೆ ಇದೆ. ನಮ್ಮಲ್ಲಿ ಬೇಡಿಕೆ ಇರುವುದು ಈಗಾಗಲೇ ಸುಮಾರು 78 ಕಡೆ ಇದೆ. ಎಲ್ಲಾ ಕಡೆ ಏಕಕಾಲಕ್ಕೆ ಕೊಡುವುದಕ್ಕೆ ಆಗುವುದಿಲ್ಲ. ಇದನ್ನು ಪರಿಶೀಲನೆ ಮಾಡಿ ಹಂತಹಂತವಾಗಿ ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ರಾಜ್ಯದ ತಲಾ ಆದಾಯದ ಬಗ್ಗೆ

353 (3220) ಶ್ರೀ ರಾಜುಗೌಡ ಜಿ. (ಹನ್ನೂರು): ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1997-98ರಲ್ಲಿ ತಲಾದಾಯಎಷ್ಟು ಇದ್ದಿತು?

ಆ) ಹಿಂದಿನ ದಶಕದಲ್ಲಿ ತಲಾದಾಯ ಎಷ್ಟುಇದ್ದಿತು?

ಇ) ಇದು ರಾಷ್ಟ್ರೀಯ ಸರಾಸರಿ ಆದಾಯಕ್ಕಿಂತ ಎಷ್ಟು ಹೆಚ್ಚು ಅಥವಾ ಕಡಿಮೆ ಆಗಿದೆ 1997-98ರ ತಲಾದಾಯಕ್ಕಿಂತ?

ಈ) ತಲಾದಾಯವನ್ನು ರಾಷ್ಟ್ರೀಯ ಸರಾಸರಿ ಆದಾಯಕ್ಕಿಂತ ಹೆಚ್ಚು ಮಾಡಲು ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಮತಿ ಸುಮಾ ವಸಂತ (ಯೋಜನಾ ರಾಜ್ಯ ಸಚಿವರು) :

ಅ) ಆಧಾರ ವರ್ಷ 1980-81

1997-98ರಲ್ಲಿ ಕರ್ನಾಟಕರಾಜ್ಯದಲ್ಲಿನ ತಲಾವಾರು ಆದಾಯವುಪ್ರಸಕ್ತ ಬೆಲೆಗಳಲ್ಲಿ 11693ರೂ.ಗಳುಹಾಗೂ ಸ್ಥಿರ (1980-81) ಬೆಲೆಗಳಲ್ಲಿ 2761 ರೂ. ಗಳಾಗಿತು.